> ಕಾಲದ ಒತ್ತಡದಿಂದ ದೂರ ಸರಿಯುವುದು ಸಾಧ್ಯವಾಗುವುದಿಲ್ಲ. ಈ ಮಕ್ಕಳಿಗೆ ಅದನ್ನು ನಿಭಾಯಿಸುವುದು ಹೇಗೆ ಎಂದು ಹೇಳಿಕೊಡುವುದೇ ಒಳಿತು

ಆಗಿಬಿಡುತ್ತಾರೆ. ಹಿಂದೆ ಹಳ್ಳಿಗಳಲ್ಲಾದರೆ ಅಮ್ಮ–ಮಕ್ಕಳ ಜಗತ್ತಿನಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗುತ್ತಿರಲಿಲ್ಲ. ಲಂಗ ದಾವಣಿಯಿಂದ ಅಮ್ಮನ ಸೀರೆಗೆ ಹೆಣ್ಣುಮಕ್ಕಳು ತುಂಬಾ ಸುಲಭವಾಗಿ ಶಿಫ್ಟ್ ಆಗಿಬಿಡುತ್ತಿದ್ದರು. ಆದರೆ, ಈಗ ಅಂಥ ಬದಲಾವಣೆ ಸಾಧ್ಯವಿಲ್ಲ. ಸ್ಮಾರ್ಟ್‌ಫೋನ್ ಕಾಲದ ಹುಡುಗಿಯರ ಅಮ್ಮಂದಿರಾಗುವುದು ಬಹುದೊಡ್ಡ ಸವಾಲೇ ಸರಿ. ತನ್ನ ಕರುಳಕುಡಿ ಬೆಳೆದ ನಂತರ ಒಮ್ಮೆಗೇ ಅಪರಿಚಿತ ತರುಣಿಯ ರೂಪದಲ್ಲಿ ಕಾಣಿಸಿದಾಗ ಅಮ್ಮಂದಿರು ಬೆಚ್ಚುವುದು ಸಹಜ. ಹಾಗೆಂದು ಈ ಅಮ್ಮಂದಿರೇನು ಹಳೆಯಕಾಲದಲ್ಲೇ ಉಳಿದವರೇನಲ್ಲ. ಆರ್ಕುಟ್‌ನಿಂದ ಫೇಸ್‌ಬುಕ್‌ಗೆ ಅಪ್‌ಗ್ರೇಡ್ ಆದವರು, ವಾಟ್ಸ್‌ಆಪ್ ಅನ್ನೂ ನಿಭಾಯಿಸಿಕೊಂಡು ಬರುತ್ತಿರುವವರು. ಆದರೆ, ಮಕ್ಕಳು ಮತ್ತಷ್ಟು ಫಾಸ್ಟ್. ತನ್ನೊಂದಿಗೆ ಮಾತನಾಡುವುದಕ್ಕಿಂತಲೂ ಹೆಚ್ಚಾಗಿ ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೊ ಹಾಕುತ್ತ, ಮೊಬೈಲ್‌ನಲ್ಲಿ ಕ್ಷಣಕ್ಕೊಂದು ಸ್ಟೇಟಸ್ ಹಾಕುತ್ತ ಇರುವ ಮಗಳನ್ನು ಕಂಡಾಗ ಅಮ್ಮನ ಎದೆಯೊಳಗೆ ತಳಮಳ ಶುರುವಾಗದೆ ಇರುವುದೇ?

‘ಅಮ್ಮ ಸರಿ ಇಲ್ಲ’ ಎನ್ನುವುದು ಮಗಳ ಅಳಲು. ‘ಮಗಳು ನಾನು ಅಂದುಕೊಂಡಂತಿಲ್ಲ’ ಎನ್ನುವುದು ಅಮ್ಮನ ದೂರು. ಪ್ರತಿ ಅಮ್ಮ ಮಗಳ ನಡುವೆಯೂ ಇಂತಹ ಜಟಾಪಟಿ ನಡೆಯುವುದುಂಟು. ಮೊನ್ನೆ ಬೆಂಗಳೂರಿನ ಮಲ್ಲೇಶ್ವರದ ಮಂತ್ರಿಸ್ಕ್ವೇರ್ ಬಳಿ ಇರುವ ಮೆಟ್ರೊ ರೈಲಿನಲ್ಲೊಂದು ಘಟನೆ ನಡೆಯಿತು. ಓಡಿಬಂದು ರೈಲು ಹತ್ತಿದ ಹುಡುಗಿಯೊಬ್ಬಳ ಮುಖದಲ್ಲಿ ಗಡಿಬಿಡಿ–ಆತಂಕ ಎದ್ದುಕಾಣುತ್ತಿತ್ತು. ತನ್ನನ್ನು ಯಾರೋ ಅಟ್ಟಿಸಿಕೊಂಡು ಬಂದರೇನೋ ಎಂಬಷ್ಟು ಆ ಹುಡುಗಿ ಹೆದರಿದ್ದಳು. ಮೆಟ್ರೊ ಹೊಕ್ಕವಳೇ ಮೊದಲು ಮೊಬೈಲ್ ಮೇಲೆ ಬೆರಳಾಡಿಸುತ್ತ, ಕಾಲ್‌ಲಿಸ್ಟ್‌ನಲ್ಲಿ ಆಯ್ದ ನಂಬರೊಂದನ್ನು ಅಳಿಸಿಹಾಕಿದಳು. ಚಕ್ಕನೆ ವಿಡಿಯೊ ಕಾಲ್ ಆನ್ ಮಾಡಿ, ‘ಅಮ್ಮ, ನೋಡು ಬೇಕಾದರೆ, ನಾನಿನ್ನೂ ಮೆಟ್ರೋದಲ್ಲೇ ಇದ್ದೇನೆ... ನನ್ನ ಮೇಲೆ ನಿಂಗೆ ಯಾಕೆ ಡೌಟು? ಅಲ್ಲಿ ತಲುಪಿದ ಕೂಡಲೇ ಫೋನ್ ಮಾಡುತ್ತೇನೆ’ ಎಂದು ಅಮ್ಮನೊಂದಿಗೆ ಮಾತನಾಡಿದಳು. ಅವಳ ಮಾತುಗಳಲ್ಲಿ ಅಮ್ಮನ ಕುರಿತ ಆಕ್ಷೇಪವೂ ಇತ್ತು, ಅಮ್ಮನನ್ನು ಸಮಾಧಾನಪಡಿಸುವ ಪ್ರಯತ್ನವೂ ಇತ್ತು.

ಅಂದಹಾಗೆ, ಉತ್ತರ ದಕ್ಷಿಣ ಧ್ರುವಗಳಂತೆ ಸೆಟೆದು ನಿಲ್ಲುವ ಈ ಅಮ್ಮ–ಮಗಳ ನಡುವೆ ಸಮಸ್ಯೆಯಾದರೂ ಯಾರದು? ಕಾಲ ಕೆಟ್ಟುಹೋಯಿತು ಎಂದು ಎಲ್ಲವನ್ನೂ ಕಾಲಚಕ್ರದ ಮೇಲೆ ಹಾಕುವಂತಿಲ್ಲ. ಸಮಸ್ಯೆ ಇರುವುದು, ಹದಿಹರೆಯದಲ್ಲಿ. ಕಾಲ ಯಾವುದಾದರೂ ಹದಿಹರೆಯ ಎಂಬುದು ಒಂದೇ ಮಾದರಿಯದು.



ನಭಾ ಜೊತೆಗೆ ವಿನಯಾ ಒಕ್ಕುಂದ

ಈಗ ಮಗಳನ್ನು ಕಾಳಜಿಯಿಂದ ಆಕ್ಷೇಪಿಸುವ ಅಮ್ಮನೂ, ತನ್ನ ತಾರುಣ್ಯದ ದಿನಗಳಲ್ಲಿ ‘ಈ ಅಮ್ಮ ಸರಿಯಿಲ್ಲ’ ಎಂದು ತನ್ನಮ್ಮನ ಬಗ್ಗೆ ಗೊಣಗಿದವಳೇ. ಈಗ, ಹರೆಯ ಮಾಸಿ ಗೃಹಿಣಿಯ ಜವಾಬ್ದಾರಿ ಬಂದಮೇಲೆ, ಮಗಳ ರೂಪದಲ್ಲಿ ತನ್ನ ಯೌವನವನ್ನೇ ತನ್ನೆದುರು ಕಂಡಂತಾಗಿ ಗಾಬರಿಯಾಗುತ್ತಿದ್ದಾಳೆ. ಮಗಳಷ್ಟೇ ಅಲ್ಲ, ಕಾಲದ